2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 118/2016</u>

| | | |
|---|---|---|
| ಸಾಕ್ಷಿದಾರರ ಹೆಸರು | - ಕೆ ಎನ್ ಗಜೇಂದ್ರಪ್ಪ | ಪಿಡಬ್ಲ್ಯೂ- 15 |
| ತಂದೆಯ ಹೆಸರು | - ನಿಂಗಪ್ಪ | ಸಿಡಬ್ಲ್ಯೂ -26 |
| ವಯಸ್ಸು | - 57 ವರ್ಷ | |
| ಉದ್ಯೋಗ | - ಸಿ ಪಿ ಐ, ಹಜಾದ್ ನಗರ ವೃತ್ತ, ದಾವಣಗೆರೆ | |
| ವಾಸ ಸ್ಥಳ | - ದಾವಣಗೆರೆ | |

(ಈ ದಿನ 1, 2 ಮತ್ತು 4 ನೇ ಆರೋಪಿತರು ನ್ಯಾಯಾಲಯಕ್ಕೆ ಗೈರು ಹಾಜರಿದ್ದು ಸದರಿ ಆರೋಪಿತರ ಪರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿರುತ್ತಾರೆ ಮತ್ತು ಸದರಿ ಆರೋಪಿತರ ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲವೆಂದು ತಿಳಿಸಿರುತ್ತಾರೆ ಹಾಗಾಗಿ 1, 2 ಮತ್ತು 4 ನೇ ಆರೋಪಿತರ ಗೈರು ಹಾಜರಿಯಲ್ಲಿ ಸಾಕ್ಷಿಯ ವಿಚಾರಣೆಯನ್ನು ನಡೆಸಲಾಯಿತು.)

ದಿನಾಂಕಃ **03.01.2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

1. ನಾನು 2015 ನೇ ಇಸವಿ ನವೆಂಬರ್ 3 ನೇ ತಾರೀಖಿನಿಂದ ಡಿಸೆಂಬರ್ ನ ಮೊದಲನೇ ವಾರದವರೆಗೆ ಹೊನ್ನಾಳಿ ವೃತ್ತದ ಪ್ರಭಾರೆ ವೃತ್ತ ನಿರೀಕ್ಷಕನಾಗಿ ಕಾರ್ಯ ನಿರ್ವಹಿಸಿದ್ದೇನೆ.
2. ದಿನಾಂಕ 06.11.2015 ರಂದು ಹೊನ್ನಾಳಿ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ 278/2015 ಗೆ ಸಂಬಂಧಿಸಿದ ಆರೋಪಿತರನ್ನು ಪತ್ತೆ ಮಾಡಿಕೊಂಡು ಬರಲು ಹೊನ್ನಾಳಿ ಠಾಣೆಯ ಪಿ ಎಸ್ ಐ ರವರಾದ ಪ್ರಾಸಾ.14 ರವರಿಗೆ ಜ್ಞಾಪನಾ

ನೀಡಿ ಕಳುಹಿಸಿದ್ದೇನೆ.

3. ದಿನಾಂಕ 07.11.2015 ರಂದು ಬೆಳಿಗ್ಗೆ 7.00 ಗಂಟೆಗೆ ಫ್ರಾಸಾ.14 ರವರು ಸಿಬ್ಬಂದಿಗಳೊಂದಿಗೆ ಸದರಿ ಪ್ರಕರಣದ ಆರೋಪಿತರಾದ ಮನು, ಮಂಜುನಾಥ, ಅಜಯ್, ಬೆನಕೇಶ ಮತ್ತು ಶ್ರೀಧರ ರವರೊಂದಿಗೆ ಮತ್ತು ಸದರಿ ಆರೋಪಿತರಿಂದ ಅಮಾನತುಪಡಿಸಿಕೊಂಡಿದ್ದ ಕೆ ಎ 17 ಬಿ 6860 ನೋಂದಣಿ ಸಂಖ್ಯೆಯ ಎರ್ಟಿಗಾ ಕಾರು, ಒಂದು ಲಾಂಗು, ಮೂರು ಜೊತೆ ಕೈ ಗ್ಲೌಸುಗಳು ಮತ್ತು ಮೂರು ಮಂಕಿ ಕ್ಯಾಪುಗಳನ್ನು ಕಚೇರಿಯಲ್ಲಿ ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ಸದರಿ ಮುದ್ದೆ ಮಾಲುಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ **178/2015** ರಲ್ಲಿ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಸದರಿ ಮಾಲು ಪಟ್ಟಿಯ ದೃಢೀಕೃತ ಪ್ರತಿಯನ್ನು ನೋಡುತ್ತಿದ್ದು ಅದನ್ನು ನಿಪಿ.30 ಎಂದು, ಸಾಕ್ಷಿಯ ನಿಪಿ.30(ಎ) ಎಂದು ಗುರುತಿಸಲಾಯಿತು.

4. ನಂತರ ಮೇಲೆ ಹೇಳಿದ 5 ಜನ ಆರೋಪಿತರನ್ನು ವಿಚಾರಿಸಿ ಅವರ ಸ್ವಇಚ್ಛಾ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಆರೋಪಿ ಮನು ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ತಾನು ಕರೆದುಕೊಂಡು ಹೋದ ಕಡೆ ಬಂದಲ್ಲಿ ಬಲಮುರಿ ಗ್ರಾಮದಲ್ಲಿ ಕಳವು ಮಾಡಿದ ಬಂಗಾರದ ಜುಮುಕಿ, ಬೆಂಡೋಲೆಯನ್ನು, ಸಾಸ್ವೆಹಳ್ಳಿ ಗ್ರಾಮಕ್ಕೆ ಬರುವಾಗ ಉಪಯೋಗಿಸಿದ್ದ ಮೋಟಾರು ಸೈಕಲನ್ನು ತೋರಿಸಿ ಹಾಜರುಪಡಿಸುವುದಾಗಿ ಮತ್ತು

ಸಾಸ್ವೆಹಳ್ಳಿಯ ಮನೆಯೊಂದರಲ್ಲಿ ದೋಚಿದ ಬಂಗಾರದ ಒಡವೆಗಳನ್ನು ಒಂದು ಫೈನಾನ್ಸ್ ನಲ್ಲಿ ಅಡವಿಟ್ಟಿದ್ದು, ಅದನ್ನು ತೋರಿಸಿ ಕೊಡಿಸಿ ಹಾಜರುಪಡಿಸುವುದಾಗಿ ಮತ್ತು ಅವರು ಕಳವು ಮಾಡಿದ ಜಾಗಗಳನ್ನು ತೋರಿಸುವುದಾಗಿ ನುಡಿದಿರುತ್ತಾರೆ. ಸದರಿ 1 ನೇ ಆರೋಪಿಯ ಸ್ವಇಚ್ಛಾ ಹೇಳಿಕೆಯ ಸದರಿ ಭಾಗವನ್ನು ನಿಪಿ.31 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.31(ಎ) ಎಂದು ಗುರುತಿಸಲಾಯಿತು.

5. 2 ನೇ ಆರೋಪಿ ಮಂಜುನಾಥ ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ತಾನು ಕರೆದುಕೊಂಡು ಹೋದ ಕಡೆ ಬಂದಲ್ಲಿ ಅವರು ನ.ರಾ.ಪುರ ತಾಲ್ಲೂಕು, ಮತ್ತಿಮರ ಬಾಳೆಗ್ರಾಮದಲ್ಲಿ ದೋಚಿಕೊಂಡು ಬಂದಾಗ ಆತನ ಪಾಲಿಗೆ ಬಂದಿದ್ದ ವಸ್ತುಗಳನ್ನು ಆತನ ಮನೆಯಲ್ಲಿಟ್ಟಿದ್ದು, ಅವುಗಳನ್ನು ಮತ್ತು ಮೊಬೈಲ್ ಮಾರಾಟ ಮಾಡಿದ್ದ ಹರೀಶನನ್ನು ತೋರಿಸಿ ವಸ್ತುಗಳನ್ನು ಹಾಜರುಪಡಿಸುವುದಾಗಿ ಮತ್ತು ಅವರು ಕಳವು ಮಾಡಿದ ಜಾಗಗಳನ್ನು ತೋರಿಸುವುದಾಗಿ ನುಡಿದಿರುತ್ತಾನೆ. ಸದರಿ 2 ನೇ ಆರೋಪಿಯ ಸ್ವಇಚ್ಛಾ ಹೇಳಿಕೆಯ ಸದರಿ ಭಾಗವನ್ನು ನಿಪಿ.32 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.32(ಎ) ಎಂದು ಗುರುತಿಸಲಾಯಿತು.

6. 3 ನೇ ಆರೋಪಿ ಅಜಯ್ ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ತಾನು ಕರೆದುಕೊಂಡು ಹೋದ ಕಡೆ ಬಂದಲ್ಲಿ ಅವರು ನ.ರಾ.ಪುರ

ತಾಲ್ಲೂಕು, ಮತ್ತಿಮರ ಬಾಳೆಗ್ರಾಮದಲ್ಲಿ ದೋಚಿಕೊಂಡು ಬಂದಾಗ ಆತನ ಪಾಲಿಗೆ ಬಂದಿದ್ದ ವಸ್ತುಗಳನ್ನು ಆತನ ಮನೆಯಲ್ಲಿಟ್ಟಿದ್ದು ಅವುಗಳನ್ನು ಮತ್ತು ಸಾಸ್ವೆಹಳ್ಳಿ ಗ್ರಾಮದ ಒಂದು ಮನೆಯಲ್ಲಿ ಸುಲಿಗೆ ಮಾಡಲು ಉಪಯೋಗಿಸಿದ್ದ ಕುಡುಗೋಲನ್ನು ತೋರಿಸಿ ಹಾಜರುಪಡಿಸುವುದಾಗಿ ಮತ್ತು ಅವರು ಕಳವು ಮಾಡಿದ ಜಾಗಗಳನ್ನು ತೋರಿಸುವುದಾಗಿ ನುಡಿದಿರುತ್ತಾನೆ. ಸದರಿ 3 ನೇ ಆರೋಪಿಯ ಸ್ವಇಚ್ಛಾ ಹೇಳಿಕೆಯ ಸದರಿ ಭಾಗವನ್ನು ನಿಪಿ.33 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.33(ಎ) ಎಂದು ಗುರುತಿಸಲಾಯಿತು.

7. 5 ನೇ ಆರೋಪಿ ಶ್ರೀಧರ್ ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ತಾನು ಕರೆದುಕೊಂಡು ಹೋದ ಕಡೆ ಬಂದಲ್ಲಿ ಅವರು ನ.ರಾ.ಪುರ ತಾಲ್ಲೂಕು, ಮತ್ತಿಮರ ಬಾಳೆಗ್ರಾಮದಲ್ಲಿ ದೋಚಿಕೊಂಡು ಬಂದು ಆತನ ಮನೆಯಲ್ಲಿಟ್ಟಿರುವ ವಸ್ತುಗಳನ್ನು ತೋರಿಸಿ ಹಾಜರುಪಡಿಸುವುದಾಗಿ ನುಡಿದಿರುತ್ತಾನೆ. ಸದರಿ 5 ನೇ ಆರೋಪಿಯ ಸ್ವಇಚ್ಛಾ ಹೇಳಿಕೆಯ ಸದರಿ ಭಾಗವನ್ನು ನಿಪಿ.34 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.34(ಎ) ಎಂದು ಗುರುತಿಸಲಾಯಿತು.

8. ಅದೇ ದಿನ ಅಂದರೆ ದಿನಾಂಕ 07.11.2015 ರಂದು ನ.ರಾ.ಪುರ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ 135/2015 ಕ್ಕೆ ಸಂಬಂಧಿಸಿದ ಮುದ್ದೆ ಮಾಲುಗಳನ್ನು

ಅಮಾನತುಪಡಿಸಿಕೊಳ್ಳಲು ಪಂಚರಾದ ಫ್ರಾಸಾ.11 ಮತ್ತು ಫ್ರಾಸಾ.9 ರವರನ್ನು ನನ್ನ ಕಚೇರಿಗೆ ಕರೆಯಿಸಿಕೊಂಡು, ಅವರಿಗೆ ನೋಟೀಸನ್ನು ಜಾರಿ ಮಾಡಿ ಅವರುಗಳಿಗೆ 1 ರಿಂದ 5 ನೇ ಆರೋಪಿತರನ್ನು ತೋರಿಸಿ, ಅವರು ಏನು ತೋರಿಸಿ ಹಾಜರುಪಡಿಸುತ್ತಾರೋ ಅವುಗಳ ಬಗ್ಗೆ ಪಂಚನಾಮೆ ಮಾಡಿಕೊಳ್ಳಲು ಕೇಳಿಕೊಂಡ ಮೇರೆಗೆ ಅವರು ಒಪ್ಪಿಕೊಂಡಿರುತ್ತಾರೆ. ನಂತರ 1 ರಿಂದ 5 ನೇ ಆರೋಪಿತರು ಮೇಲೆ ಹೇಳಿದ ಪಂಚರು ಮತ್ತು ಸಿಬ್ಬಂದಿಗಳೊಂದಿಗೆ ಹೊರಟಿದ್ದು 3 ನೇ ಆರೋಪಿ ಅಜಯ್ ಈತನು ಸದಾಶಿವಪುರ ಗ್ರಾಮದ ನಾರಾಯಣಪ್ಪ ರವರ ಮನೆಯಲ್ಲಿ ಇಟ್ಟಿದ್ದ ನ.ರಾ.ಪುರ ತಾಲ್ಲೂಕು, ಮತ್ತಿಮರ ಬಾಳೆಗ್ರಾಮದಲ್ಲಿ ದರೋಡೆ ಮಾಡಿದ್ದ ಪ್ಯಾಂತರ್ ಡಿಯೋ ಎಂದು ಬರೆದಿದ್ದ ಮತ್ತು ಬಟರ್ ಫ್ಲೈ ಎಂದು ಬರೆದಿದ್ದ ಎರಡು ಎಲೆಕ್ಟ್ರಿಕ್ ಒಲೆಗಳನ್ನು(ಸ್ಟೌವ್) ಮತ್ತು ಸುಮಾರು 1 ವರೆ ಅಡಿ ಉದ್ದದ ಮೂರು ಕುಡುಗೋಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಮಧ್ಯಾಹ್ನ 2.30 ಗಂಟೆಯಿಂದ 3.15 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿ ಅಮಾನತುಪಡಿಸಿಕೊಂಡಿರುತ್ತೇನೆ. ಸದರಿ ಪಂಚನಾಮೆಯ ದೃಢೀಕೃತ ಪ್ರತಿಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.19 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.19(ಸಿ) ಎಂದು ಗುರುತಿಸಲಾಯಿತು.

9. ನಂತರ 2 ನೇ ಆರೋಪಿ ಸದಾಶಿವಪುರ ಗ್ರಾಮದ ತನ್ನ ವಾಸದ ಮನೆಯಲ್ಲಿದ್ದ ನ.ರಾ.ಪುರ ತಾಲ್ಲೂಕು, ಮತ್ತಿಮರ ಬಾಳೆಗ್ರಾಮದಲ್ಲಿ ದರೋಡೆ ಮಾಡಿದ್ದವು ಎಂದು ಹೇಳಿ ಹಾಜರುಪಡಿಸಿದ ಒಂದು ಕಪ್ಪು ಬಣ್ಣದ ಟಿ ವಿ ಮತ್ತು ಎಂ ಆರ್ ಲೈಟ್ ಎಂದು ಬರೆದಿದ್ದ ಚಾರ್ಜರ್ ಲೈಟನ್ನು ಹಾಜರುಪಡಿಸಿದ್ದು, ಅವುಗಳನ್ನು ಮೇಲೆ ಹೇಳಿದ ಪಂಚರ ಸಮಕ್ಷಮ ಮಧ್ಯಾಹ್ನ 3.25 ಗಂಟೆಯಿಂದ 4.10 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿ ಅಮಾನತುಪಡಿಸಿಕೊಂಡಿರುತ್ತೇನೆ. ಸದರಿ ಪಂಚನಾಮೆಯ ದೃಢೀಕೃತ ಪ್ರತಿಯನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ.20 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.20(ಸಿ) ಎಂದು ಗುರುತಿಸಲಾಯಿತು.

10. ನಂತರ 1 ಮತ್ತು 5 ನೇ ಆರೋಪಿತರು ಹೊನ್ನಾಳಿ ತಾಲ್ಲೂಕು, ಚಿಕ್ಕಬಾಸೂರು ಗ್ರಾಮದ 5 ನೇ ಆರೋಪಿ ಶ್ರೀಧರನ ವಾಸದ ಮನೆಯಲ್ಲಿ ಇಟ್ಟಿದ್ದ ನ.ರಾ.ಪುರ ತಾಲ್ಲೂಕು, ಮತ್ತಿಮರ ಬಾಳೆಗ್ರಾಮದಲ್ಲಿ ದರೋಡೆ ಮಾಡಿದ್ದವು ಎಂದು ಹೇಳಿ ಹಾಜರುಪಡಿಸಿದ ಹೆಚ್ ಪಿ ಕಂಪೆನಿಯ ಒಂದು ಕಂಪ್ಯೂಟರ್ ಮಾನಿಟರ್, ಕಂಪ್ಯೂಟರ್ ನ ಸಿ ಪಿ ಯು, ಎರಡು ಸ್ಪೀಕರ್, 5 ಗ್ರಾಂ ತೂಕದ ಒಂದು ಜೊತೆ ಬಂಗಾರದ ಬೆಂಡೋಲೆ , ಜುಮುಕಿ ಮತ್ತು ಮನೆಯ ಹೊರಭಾಗದಲ್ಲಿ ನಿಲ್ಲಿಸಿದ್ದ ಕೆ ಎ 14 ಜೆ 9298 ನೋಂದಣಿ ಸಂಖ್ಯೆಯ ಬಜಾಜ್ ಕಂಪೆನಿಯ ಮೋಟಾರು ಸೈಕಲನ್ನು ತೋರಿಸಿದ್ದು, ಅವುಗಳನ್ನು ಮೇಲೆ

ಹೇಳಿದ ಪಂಚರ ಸಮಕ್ಷಮ ಮಧ್ಯಾಹ್ನ 5.30 ಗಂಟೆಯಿಂದ 6.15 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿ ಅಮಾನತುಪಡಿಸಿಕೊಂಡಿರುತ್ತೇನೆ. ಸದರಿ ಪಂಚನಾಮೆಯ ದೃಢೀಕೃತ ಪ್ರತಿಯನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ.21 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.21(ಸಿ) ಎಂದು ಗುರುತಿಸಲಾಯಿತು.

11. ಸದರಿ ಪಂಚನಾಮೆಯ ಕಾಲಕ್ಕೆ ಅಕ್ಕಸಾಲಿಗರಾದ ಚಾಸಾ.16 ಸಂತೋಷ್ ರವರನ್ನು ಕರೆಯಿಸಿ ಅವರಿಂದ ಮೇಲೆ ಹೇಳಿದ ಬೆಂಡೋಲೆ ಮತ್ತು ಜುಮುಕಿಯ ಪರೀಕ್ಷೆ ಮತ್ತು ತೂಕ ಮಾಡಿಸಿರುತ್ತೇನೆ ಮತ್ತು ಸದರಿಯವರ ಸಹಿಯನ್ನು ಪಂಚನಾಮೆಗೆ ಪಡೆದುಕೊಂಡಿರುತ್ತೇನೆ. ನಂತರ ವಶಪಡಿಸಿಕೊಂಡ ಎಲ್ಲಾ ಮುದ್ದೆ ಮಾಲುಗಳು ಮತ್ತು ಆರೋಪಿತರೊಂದಿಗೆ ಕಚೇರಿಗೆ ಹಿಂದಿರುಗಿ ಮುದ್ದೆ ಮಾಲುಗಳನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ 180/2015, 181/2015 ಮತ್ತು 182/2015 ರಲ್ಲಿ ಅಳವಡಿಸಿಕೊಂಡು, ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ಮಾಲು ಪಟ್ಟಿಗಳ ದೃಢೀಕೃತ ಪ್ರತಿಗಳನ್ನು ನೋಡುತ್ತಿದ್ದು ಅವುಗಳನ್ನು ಕ್ರಮವಾಗಿ ನಿಪಿ35 ರಿಂದ ನಿಪಿ.37 ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.35(ಎ) ಯಿಂದ ನಿಪಿ.37(ಎ) ಎಂದು ಗುರುತಿಸಲಾಯಿತು. ನಂತರ ಆರೋಪಿತರನ್ನು ರಿಮ್ಯಾಂಡ್ ಅರ್ಜಿಯೊಂದಿಗೆ ಸಿಬ್ಬಂದಿ ಮೂಲಕ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

12. ನಂತರ ಅದೇ ದಿನ ಸಾಕ್ಷಿದಾರರಾದ ಫ್ರಾಸಾ.11 ರವರ ಹೇಳಿಕೆಯನ್ನು ನಿಪಿ.24 ರಂತೆ, ಫ್ರಾಸಾ.9 ರವರ ಹೇಳಿಕೆಯನ್ನು ನಿಪಿ.22 ರಂತೆ, ಫ್ರಾಸಾ.8 ಮತ್ತು ಸಿಬ್ಬಂದಿಗಳಾದ ಚಾಸಾ.19, ಚಾಸಾ.20, ಚಾಸಾ.21 ರಿಂದ ಚಾಸಾ.23 ಮತ್ತು ಫ್ರಾಸಾ.14 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

13. ನಂತರ ನನಗೆ ವರ್ಗಾವಣೆಯಾಗಿದ್ದರಿಂದ ಪ್ರಕರಣದ ಮುಂದಿನ ತನಿಖೆಗಾಗಿ ಕಡತವನ್ನು ನನ್ನ ನಂತರ ಬಂದ ಸಿ ಪಿ ಐ ರಮೇಶ್ ರವರಿಗೆ ಹಾಜರುಪಡಿಸಿರುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರ ಪೈಕಿ 3 ನೇ ಆರೋಪಿ ಅಜಯ್ ಮತ್ತು 5 ನೇ ಆರೋಪಿ ಶ್ರೀಧರ್ ನನ್ನು ನೋಡಿ ಗುರುತಿಸಿರುತ್ತಾರೆ. ಈ ದಿನ ನ್ಯಾಯಾಲಯಕ್ಕೆ 1, 2 ಮತ್ತು 4 ನೇ ಆರೋಪಿತರು ಗೈರು ಹಾಜರಿದ್ದು ಅವರ ಖುದ್ದು ಹಾಜರಾತಿಗೆ ವಿನಾಯಿತಿ ಕೋರಿ ಸದರಿ ಆರೋಪಿತರ ಪರ ವಕೀಲರು ಸಲ್ಲಿಸಿರುವ ಅರ್ಜಿಯಲ್ಲಿ ಸದರಿ ಆರೋಪಿತರ ಗುರುತಿಸುವಿಕೆಯ ಬಗ್ಗೆ ತಕರಾರು ಇಲ್ಲವೆಂದು ನುಡಿದಿರುತ್ತಾರೆ. ಸಾಕ್ಷಿಯು ಗೈರು ಹಾಜರಿರುವ 1, 2 ಮತ್ತು 4 ನೇ ಆರೋಪಿತರನ್ನು ನೋಡಿದರೆ ಗುರುತಿಸುವುದಾಗಿ ನುಡಿದಿರುತ್ತಾರೆ.

**<u>ಪಾಟೀ ಸವಾಲುಃ ಶ್ರೀ ಹೆಚ್ ಎ ಟಿ ವಕೀಲರಿಂದ 1 ರಿಂದ 5 ನೇ ಆರೋಪಿತರ ಪರವಾಗಿಃ</u>**

14. ದಿನಾಂಕ 07.11.2015 ರಂದು ಬೆಳಿಗ್ಗೆ 7.00 ಗಂಟೆಗೆ ಫ್ರಾಸಾ.14 ರವರು ಸಿಬ್ಬಂದಿಗಳೊಂದಿಗೆ ಹೊನ್ನಾಳಿ ಪೊಲೀಸ್ ಠಾಣೆಯ ಪ್ರಕರಣದ ಆರೋಪಿತರಾದ ಮನು, ಮಂಜುನಾಥ, ಅಜಯ್, ಬೆನಕೇಶ ಮತ್ತು ಶ್ರೀಧರ ರವರೊಂದಿಗೆ ಮತ್ತು ಸದರಿ ಆರೋಪಿತರಿಂದ ಅಮಾನತುಪಡಿಸಿಕೊಂಡಿದ್ದ ಕೆ ಎ 17 ಬಿ 6860 ನೋಂದಣಿ ಸಂಖ್ಯೆಯ ಎರ್ಟಿಗಾ ಕಾರು, ಒಂದು ಲಾಂಗು, ಮೂರು ಜೊತೆ ಕೈ ಗೌಸುಗಳು ಮತ್ತು ಮೂರು ಮಂಕಿ ಕ್ಯಾಪುಗಳನ್ನು ಕಚೇರಿಯಲ್ಲಿ ನಿಮ್ಮ ಮುಂದೆ ಹಾಜರುಪಡಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಸದರಿ ಮುದ್ದೆ ಮಾಲುಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ **178/2015** ರಲ್ಲಿ ಅಳವಡಿಸಿಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

15. ನಂತರ ಮೇಲೆ ಹೇಳಿದ 5 ಜನ ಆರೋಪಿತರನ್ನು ವಿಚಾರಿಸಿ ಅವರ ಸ್ವಇಚ್ಛಾ ಹೇಳಿಕೆಗಳನ್ನು ಪಡೆದುಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. 1 ನೇ ಆರೋಪಿ ಮನು ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ತಾನು ಕರೆದುಕೊಂಡು ಹೋದ ಕಡೆ ಬಂದಲ್ಲಿ ಬಲಮುರಿ ಗ್ರಾಮದಲ್ಲಿ ಕಳವು ಮಾಡಿದ ಬಂಗಾರದ ಜುಮುಕಿ, ಬೆಂಡೋಲೆಯನ್ನು, ಸಾಸ್ವೆಹಳ್ಳಿ ಗ್ರಾಮಕ್ಕೆ ಬರುವಾಗ ಉಪಯೋಗಿಸಿದ್ದ ಮೋಟಾರು ಸೈಕಲನ್ನು ತೋರಿಸಿ

ಹಾಜರುಪಡಿಸುವುದಾಗಿ ಮತ್ತು ಸಾಸ್ವೆಹಳ್ಳಿಯ ಮನೆಯೊಂದರಲ್ಲಿ ದೋಚಿದ ಬಂಗಾರದ ಒಡವೆಗಳನ್ನು ಒಂದು ಫೈನಾನ್ಸ್ ನಲ್ಲಿ ಅಡವಿಟ್ಟಿದ್ದು, ಅದನ್ನು ತೋರಿಸಿ ಕೊಡಿಸಿ ಹಾಜರುಪಡಿಸುವುದಾಗಿ ಮತ್ತು ಅವರು ಕಳವು ಮಾಡಿದ ಜಾಗಗಳನ್ನು ತೋರಿಸುವುದಾಗಿ ನಿಪಿ.31 ರಂತೆ ಸ್ವಇಚ್ಛಾ ಹೇಳಿಕೆಯನ್ನು ನೀಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

16. 2 ನೇ ಆರೋಪಿ ಮಂಜುನಾಥ ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ತಾನು ಕರೆದುಕೊಂಡು ಹೋದ ಕಡೆ ಬಂದಲ್ಲಿ ಅವರು ನ.ರಾ.ಪುರ ತಾಲ್ಲೂಕು, ಮತ್ತಿಮರ ಬಾಳೆಗ್ರಾಮದಲ್ಲಿ ದೋಚಿಕೊಂಡು ಬಂದಾಗ ಆತನ ಪಾಲಿಗೆ ಬಂದಿದ್ದ ವಸ್ತುಗಳನ್ನು ಆತನ ಮನೆಯಲ್ಲಿಟ್ಟಿದ್ದು, ಅವುಗಳನ್ನು ಮತ್ತು ಮೊಬೈಲ್ ಮಾರಾಟ ಮಾಡಿದ್ದ ಹರೀಶನನ್ನು ತೋರಿಸಿ ವಸ್ತುಗಳನ್ನು ಹಾಜರುಪಡಿಸುವುದಾಗಿ ಮತ್ತು ಅವರು ಕಳವು ಮಾಡಿದ ಜಾಗಗಳನ್ನು ತೋರಿಸುವುದಾಗಿ ನಿಪಿ.32 ರಂತೆ ಸ್ವಇಚ್ಛಾ ಹೇಳಿಕೆಯನ್ನು ನೀಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

17. 3 ನೇ ಆರೋಪಿ ಅಜಯ್ ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ತಾನು ಕರೆದುಕೊಂಡು ಹೋದ ಕಡೆ ಬಂದಲ್ಲಿ ಅವರು ನ.ರಾ.ಪುರ ತಾಲ್ಲೂಕು, ಮತ್ತಿಮರ ಬಾಳೆಗ್ರಾಮದಲ್ಲಿ ದೋಚಿಕೊಂಡು ಬಂದಾಗ ಆತನ ಪಾಲಿಗೆ ಬಂದಿದ್ದ ವಸ್ತುಗಳನ್ನು

ಆತನ ಮನೆಯಲ್ಲಿಟ್ಟಿದ್ದು ಅವುಗಳನ್ನು ಮತ್ತು ಸಾಸ್ವೆಹಳ್ಳಿ ಗ್ರಾಮದ ಒಂದು ಮನೆಯಲ್ಲಿ ಸುಲಿಗೆ ಮಾಡಲು ಉಪಯೋಗಿಸಿದ್ದ ಕುಡುಗೋಲನ್ನು ತೋರಿಸಿ ಹಾಜರುಪಡಿಸುವುದಾಗಿ ಮತ್ತು ಅವರು ಕಳವು ಮಾಡಿದ ಜಾಗಗಳನ್ನು ತೋರಿಸುವುದಾಗಿ ನಿಪಿ.33 ರಂತೆ ಸ್ವಇಚ್ಛಾ ಹೇಳಿಕೆಯನ್ನು ನೀಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

18. 5 ನೇ ಆರೋಪಿ ಶ್ರೀಧರ್ ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ತಾನು ಕರೆದುಕೊಂಡು ಹೋದ ಕಡೆ ಬಂದಲ್ಲಿ ಅವರು ನ.ರಾ.ಪುರ ತಾಲ್ಲೂಕು, ಮತ್ತಿಮರ ಬಾಳೆಗ್ರಾಮದಲ್ಲಿ ದೋಚಿಕೊಂಡು ಬಂದು ಆತನ ಮನೆಯಲ್ಲಿಟ್ಟಿರುವ ವಸ್ತುಗಳನ್ನು ತೋರಿಸಿ ನಿಪಿ.34 ರಂತೆ ಸ್ವಇಚ್ಛಾ ಹೇಳಿಕೆಯನ್ನು ನೀಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

19. ಅದೇ ದಿನ ಅಂದರೆ ದಿನಾಂಕ 07.11.2015 ರಂದು ನ.ರಾ.ಪುರ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ 135/2015 ಕ್ಕೆ ಸಂಬಂಧಿಸಿದ ಮುದ್ದೆ ಮಾಲುಗಳನ್ನು ಅಮಾನತುಪಡಿಸಿಕೊಳ್ಳಲು ಪಂಚರಾದ ಫ್ರಾಸಾ.11 ಮತ್ತು ಫ್ರಾಸಾ.9 ರವರನ್ನು ನಿಮ್ಮ ಕಚೇರಿಗೆ ಕರೆಯಿಸಿಕೊಂಡಿದ್ದಾಗಿ, ಅವರಿಗೆ ನೋಟೀಸನ್ನು ಜಾರಿ ಮಾಡಿ ಅವರುಗಳಿಗೆ 1 ರಿಂದ 5 ನೇ ಆರೋಪಿತರನ್ನು ತೋರಿಸಿದ್ದಾಗಿ, ಅವರು ಏನು ತೋರಿಸಿ ಹಾಜರುಪಡಿಸುತ್ತಾರೋ ಅವುಗಳ ಬಗ್ಗೆ ಪಂಚನಾಮೆ

ಮಾಡಿಕೊಳ್ಳಲು ಕೇಳಿಕೊಂಡಿದ್ದಾಗಿ, ಅದಕ್ಕೆ ಅವರು ಒಪ್ಪಿಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

20. ನಂತರ 1 ರಿಂದ 5 ನೇ ಆರೋಪಿತರು ಮೇಲೆ ಹೇಳಿದ ಪಂಚರು ಮತ್ತು ಸಿಬ್ಬಂದಿಗಳೊಂದಿಗೆ ಹೊರಟಿದ್ದಾಗಿ 3 ನೇ ಆರೋಪಿ ಅಜಯ್ ಈತನು ಸದಾಶಿವಪುರ ಗ್ರಾಮದ ನಾರಾಯಣಪ್ಪ ರವರ ಮನೆಯಲ್ಲಿ ಇಟ್ಟಿದ್ದ ನ.ರಾ.ಪುರ ತಾಲ್ಲೂಕು, ಮತ್ತಿಮರ ಬಾಳೆಗ್ರಾಮದಲ್ಲಿ ದರೋಡೆ ಮಾಡಿದ್ದ ಪ್ಯಾಂತರ್ ಡಿಯೋ ಎಂದು ಬರೆದಿದ್ದ ಮತ್ತು ಬಟರ್ ಫ್ಲೈ ಎಂದು ಬರೆದಿದ್ದ ಎರಡು ಎಲ್ಕ್ಟ್ರಿಕ್ ಒಲೆಗಳನ್ನು(ಸ್ಟೌವ್) ಮತ್ತು ಸುಮಾರು 1 ವರೆ ಅಡಿ ಉದ್ದದ ಮೂರು ಕುಡುಗೋಲುಗಳನ್ನು ಹಾಜರುಪಡಿಸಿದ್ದಾಗಿ ಮತ್ತು ಅವುಗಳನ್ನು ಮಧ್ಯಾಹ್ನ 2.30 ಗಂಟೆಯಿಂದ 3.15 ಗಂಟೆಯವರೆಗೆ ನಿಪಿ.19 ರಂತೆ ಪಂಚನಾಮೆಯನ್ನು ಜರುಗಿಸಿ ಅಮಾನತುಪಡಿಸಿಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

21. ನಂತರ 2 ನೇ ಆರೋಪಿ ಸದಾಶಿವಪುರ ಗ್ರಾಮದ ತನ್ನ ವಾಸದ ಮನೆಯಲ್ಲಿದ್ದ ನ.ರಾ.ಪುರ ತಾಲ್ಲೂಕು, ಮತ್ತಿಮರ ಬಾಳೆಗ್ರಾಮದಲ್ಲಿ ದರೋಡೆ ಮಾಡಿದ್ದವು ಎಂದು ಹೇಳಿ ಹಾಜರುಪಡಿಸಿದ್ದಾಗಿ ಒಂದು ಕಪ್ಪು ಬಣ್ಣದ ಟಿ ವಿ ಮತ್ತು ಎಂ ಆರ್ ಲೈಟ್ ಎಂದು ಬರೆದಿದ್ದ ಚಾರ್ಜರ್ ಲೈಟನ್ನು ಹಾಜರುಪಡಿಸಿದ್ದಾಗಿ ಮತ್ತು ಅವುಗಳನ್ನು ಮೇಲೆ ಹೇಳಿದ

ಪಂಚರ ಸಮಕ್ಷಮ ಮಧ್ಯಾಹ್ನ 3.25 ಗಂಟೆಯಿಂದ 4.10 ಗಂಟೆಯವರೆಗೆ ನಿಪಿ.20 ರಂತೆ ಪಂಚನಾಮೆಯನ್ನು ಜರುಗಿಸಿ ಅಮಾನತುಪಡಿಸಿಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

22. ನಂತರ 1 ಮತ್ತು 5 ನೇ ಆರೋಪಿತರು ಹೊನ್ನಾಳಿ ತಾಲ್ಲೂಕು, ಚಿಕ್ಕಬಾಸೂರು ಗ್ರಾಮದ 5 ನೇ ಆರೋಪಿ ಶ್ರೀಧರನ ವಾಸದ ಮನೆಯಲ್ಲಿ ಇಟ್ಟಿದ್ದ ನ.ರಾ.ಪುರ ತಾಲ್ಲೂಕು, ಮತ್ತಿಮರ ಬಾಳೆಗ್ರಾಮದಲ್ಲಿ ದರೋಡೆ ಮಾಡಿದ್ದವು ಎಂದು ಹೇಳಿ ಹಾಜರುಪಡಿಸಿದ್ದಾಗಿ ಮತ್ತು ಹೆಚ್ ಪಿ ಕಂಪೆನಿಯ ಒಂದು ಕಂಪ್ಯೂಟರ್ ಮಾನಿಟರ್, ಕಂಪ್ಯೂಟರ್ ನ ಸಿ ಪಿ ಯು, ಎರಡು ಸ್ಪೀಕರ್, 5 ಗ್ರಾಂ ತೂಕದ ಒಂದು ಜೊತೆ ಬಂಗಾರದ ಬೆಂಡೋಲೆ , ಜುಮುಕಿ ಮತ್ತು ಮನೆಯ ಹೊರಭಾಗದಲ್ಲಿ ನಿಲ್ಲಿಸಿದ್ದ ಕೆ ಎ 14 ಜೆ 9298 ನೋಂದಣಿ ಸಂಖ್ಯೆಯ ಬಜಾಜ್ ಕಂಪೆನಿಯ ಮೋಟಾರು ಸೈಕಲನ್ನು ತೋರಿಸಿದ್ದಾಗಿ ಮತ್ತು ಅವುಗಳನ್ನು ನೀವು ಮೇಲೆ ಹೇಳಿದ ಪಂಚರ ಸಮಕ್ಷಮ ಮಧ್ಯಾಹ್ನ 5.30 ಗಂಟೆಯಿಂದ 6.15 ಗಂಟೆಯವರೆಗೆ ನಿಪಿ.21 ರಂತೆ ಪಂಚನಾಮೆಯನ್ನು ಜರುಗಿಸಿ ಅಮಾನತುಪಡಿಸಿಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

23. ಸದರಿ ಪಂಚನಾಮೆಯ ಕಾಲಕ್ಕೆ ಅಕ್ಕಸಾಲಿಗರಾದ ಚಾಸಾ.16 ಸಂತೋಷ್ ರವರನ್ನು ಕರೆಯಿಸಿ ಅವರಿಂದ ಮೇಲೆ

ಹೇಳಿದ ಬೆಂಡೋಲೆ ಮತ್ತು ಜುಮುಕಿಯ ಪರೀಕ್ಷೆ ಮತ್ತು ತೂಕ ಮಾಡಿಸಿದ್ದಾಗಿ ಮತ್ತು ಸದರಿಯವರ ಸಹಿಯನ್ನು ಪಂಚನಾಮೆಗೆ ಪಡೆದುಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಂತರ ವಶಪಡಿಸಿಕೊಂಡ ಎಲ್ಲಾ ಮುದ್ದೆ ಮಾಲುಗಳು ಮತ್ತು ಆರೋಪಿತರೊಂದಿಗೆ ಕಚೇರಿಗೆ ಹಿಂದಿರುಗಿ ಮುದ್ದೆ ಮಾಲುಗಳನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ 180/2015, 181/2015 ಮತ್ತು 182/2015 ರಲ್ಲಿ ಅಳವಡಿಸಿಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

24. ನೀವು ಹೇಳಿದಂತೆ ಯಾವುದೇ ಸಾಕ್ಷಿದಾರರ ಮತ್ತು ಸಿಬ್ಬಂದಿಗಳ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಹೊನ್ನಾಳಿ ಪೊಲೀಸ್ ಠಾಣೆಯಿಂದ ಸದಾಶಿವಪುರಕ್ಕೆ 2 ರಿಂದ 2 ವರೆ ಕಿಲೋ ಮೀಟರ್ ದೂರವಾಗುತ್ತದೆ. ಸದಾಶಿವಪುರದಿಂದ ಚಿಕ್ಕಬಾಸೂರು ಗ್ರಾಮಕ್ಕೆ 4 ರಿಂದ 4 ವರೆ ಕಿಲೋ ಮೀಟರ್ ದೂರವಾಗುತ್ತದೆ.

<u>ಪಾಟೀ ಸವಾಲುಃ ಶ್ರೀ ಐ ಎಸ್ ಟಿ ವಕೀಲರಿಂದ **6** ನೇ ಆರೋಪಿ ಪರವಾಗಿಃ</u>

25. ಇಂಟರ್ನೆಟ್ ನಲ್ಲಿ ವಾಹನದ ನೋಂದಣಿ ಸಂಖ್ಯೆಯನ್ನು ಫೀಡ್ ಮಾಡಿದರೆ ಅವರ ವಿವರಗಳು ದೊರಕುವ ಮಾಹಿತಿ ನಿಮಗೆ ಇದೆ ಎಂದರೆ ಸಾಕ್ಷಿ ಈಗ ಇದೆ ಆಗ ಗೊತ್ತಿರಲಿಲ್ಲ ಎನ್ನುತ್ತಾರೆ. ಆ ಬಗ್ಗೆ ನಿಮಗೆ ಹಿಂದೆಯೂ ಸಹ ಮಾಹಿತಿ ಇದ್ದು

ಸದರಿ ತಂತ್ರಜ್ಞಾನವನ್ನು ಬಳಸಿ ನೀವು 6 ನೇ ಆರೋಪಿಯ ಹೆಸರು ಮತ್ತು ವಿಳಾಸಗಳನ್ನು ಪಡೆದುಕೊಂಡು ಆತನನ್ನು ಕಡತದಲ್ಲಿ ಸೇರಿಸಿದ್ದೀರಿ ಎಂದರೆ ಸರಿಯಲ್ಲ.

(6 ನೇ ಆರೋಪಿ ಪರ ವಕೀಲರು ಉಳಿದಂತೆ 1 ರಿಂದ 5 ನೇ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.)

ಮರು ವಿಚಾರಣೆ ಇಲ್ಲಃ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ